# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

## ಸಿ.ಸಿ.ಸಂಖ್ಯೆ: 1232/2017

| | | |
|---|---|---|
| ಸಾಕ್ಷಿದಾರರ ಹೆಸರು | ಸಂಪತ್ತರಾವ ಪಾಟೀಲ | ಡಿ.ಡಬ್ಲ್ಯೂ: 1 |
| ತಂದೆಯ ಹೆಸರು | ರಂಗರಾವ | |
| ವಯಸ್ಸು | 47 ವರ್ಷ | |
| ಉದ್ಯೋಗ | ವೈದ್ಯ | |
| ವಾಸಸ್ಥಳ | ಕಸಬಾವಾಳ್ವೆ ಕೊಲ್ಲಾಪೂರ | |

ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ, ಮರಾಠಿ ಭಾಷೆ ಮಾತ್ರ ಗೊತ್ತಿದ್ದು, ಶ್ರೀ ಬಿ ಡಿ ಬಸನ್ನವರ ವಕೀಲರನ್ನು ಭಾಷಾಂತರಕರಾಗಿ ನೇಮಿಸಿ ಸಾಕ್ಷಿ ವಿಚಾರಣೆ ಮಾಡಲು ಪ್ರಮಾಣ ವಚನ ಬೋಧಿಸಿ ಕನ್ನಡದಲ್ಲಿ ವಿಚಾರಣೆ ಮಾಡಲಾಯಿತು.

ದಿ: 06.08.2026

**ಮುಖ್ಯ ವಿಚಾರಣೆ:ಶ್ರೀ ಎಸ್ ಆರ್ ಎಚ್ ವಕೀಲರಿಂದ:-**

2011-12 ರಲ್ಲಿ ಕಬ್ಬು ಕಟಾವು ಮತ್ತು ಸಾಗಾಣಿಕೆ ಕೆಲಸವನ್ನು ಎಮ್ ಕೆ ಹುಬ್ಬಳ್ಳಿ ಪಿರ್ಯಾದಿ ಕಾರ್ಖಾನೆಯಲ್ಲಿ ಗುತ್ತಿಗೆದಾರ ಆಗಿ ಕೆಲಸ ಮಾಡುತ್ತಿದ್ದೆ. ಸದರಿ ವಿಚಾರವಾಗಿ ಕರಾರು ಪತ್ರವಾಗಿತ್ತು. ರಂಗರಾವ್ ಪಾಟೀಲರವರ ಮೂಲಕ ನಾನು, ಜಯಶ್ರೀ ಅರುಣ ಪಾಟೀಲ, ಬಸೀರಹ್ಮದ ಸನದಿ, ಅಮೃತ ಪಾಟೀಲ, ಭಗವಾನ ರಜಪೂತ ಎಲ್ಲರೂ ಕಾರ್ಖಾನೆ ಕೆಲಸಕ್ಕಾಗಿ ಟ್ರಕಗಳನ್ನು ಬಿಟ್ಟಿದ್ದೆವು. 2011

ನವೆಂಬರ್ ನಿಂದ ಮಾರ್ಚ 2012 ರವರೆಗೂ ಕಬ್ಬಿನ ಸಿಜನ್ ಇತ್ತು. ಸದರಿ ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಸದರಿ ವಾಹನಕ್ಕೆ ಸಂಬಂಧಪಟ್ಟ ಆರ್ ಸಿ ಮತ್ತು ವಿಮೆಯ ಪತ್ರಗಳನ್ನು ಕಾರ್ಖಾನೆಗೆ ಕೊಟ್ಟಿರುತ್ತೇನೆ. ಸದರಿ ಸಮಯದಲ್ಲಿ ಭದ್ರತೆಗಾಗಿ ಖಾಲಿ ಸಹಿ ಮಾಡಿದ ಚೆಕ್‌ನ್ನು ಪಡೆದುಕೊಂಡಿದ್ದರು. ಸದರಿ 5 ಜನರಿಂದ ಚೆಕನ ಜೊತೆ ನನ್ನ ಚೆಕ್ಕನ್ನು ಸೇರಿಸಿ ಕಾರ್ಖಾನೆಗೆ ಕೊಟ್ಟಿರುತ್ತೇನೆ. ಯಾವುದೇ ಬಾಂಡನ್ನು ನಾನು ಕೊಟ್ಟಿರುವುದಿಲ್ಲ. ಸಂಪೂರ್ಣ ಸಿಜನ್‌ನಲ್ಲಿ ನಾನು ಕೆಲಸ ಮಾಡಿದ್ದೇನೆ. ಸದರಿ 5 ಜನರು ಸಹ ನನ್ನ ಜೊತೆ ಕೆಲಸ ಮಾಡಿದ್ದಾರೆ. ಕಾರ್ಖಾನೆಯವರು ಎಲ್ಲರಿಗೂ ತಲಾ ರೂ. 6 ಲಕ್ಷ ಮುಂಗಡ ಕೊಟ್ಟಿರುತ್ತಾರೆ. ಸದರಿ ಕರಾರು ಪತ್ರದ ಷರತ್ತುಗಳ ಪ್ರಕಾರ ನನಗೆ ಮತ್ತು ಉಳಿದ ಸದರಿ 5 ಜನರಿಗೂ ಸಹ ಹಣ ಕೊಟ್ಟಿರುವುದಿಲ್ಲ. ಸಿಜನ್ ಮುಗಿದ ನಂತರ ಕಾರ್ಖಾನೆಯವರು ನಮಗೆ ಲೆಕ್ಕಪತ್ರ ಕೊಟ್ಟಿರುವುದಿಲ್ಲ. ಎರಡು ಬಾರಿ ಕಚೇರಿ ಹೋಗಿ ಭೇಟಿ ಮಾಡಿದಾಗ ಲೆಕ್ಕಪತ್ರದ ಪುಸ್ತಕ ತೋರಿಸಿಲ್ಲ, ಯಾವುದೇ ಲೆಕ್ಕದ ವಿಚಾರದ ಬಗ್ಗೆ ಹೇಳಿಲ್ಲ. ಕಾರ್ಖಾನೆಗೆ ನಾವು ಯಾವುದೇ ಹಣವನ್ನು ಕೊಡಲು ಭಾಧ್ಯಸ್ಥರಲ್ಲ. ಯಾವುದೇ ಬಾಕಿ ಹಣಕ್ಕಾಗಿ ನಾನು ಚೆಕ್ಕನ್ನು ಕೊಟ್ಟಿರುವುದಿಲ್ಲ. ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ.ನಾನು ಈ ಕೆಳಕಂಡ ದಾಖಲೆ ಹಾಜರು ಪಡಿಸುತ್ತಿದ್ದೇನೆಃ

1. ದಿನಾಂಕ 10.11.2011 ರಿಂದ ದಿನಾಂಕ 15.03.2012 ರ ವರೆಗಿನ ಕಬ್ಬು ಸಾರಿಗೆ ಮೆಕ್ತೆದಾರರ ಬಿಲ್ಲುಗಳ 5 ಪುಟಗಳ ಸ್ಟೆಟಮೆಂಟನ್ನು ನಿಡಿ–1 ಎಂದು ಗುರುತಿಸಲಾಯಿತು.

**ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಖುಲಾಸೆಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.**

**(ಪಾಟೀ ಸವಾಲಿಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಕಿತ್ತೂರ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಕಿತ್ತೂರ.